ಈ ಮೇಲಿನ ಎರಡು ವಿಷಯಗಳಿಗೆ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಹಾಗೂ 170ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಲಾದ ವಿಷಯಕ್ಕೆ ಸದರಿ ವಿಷಯವನ್ನು ಸೇರ್ಪಡೆಗೊಳಿಸಿ ಅನುಸಮರ್ಥನೆ ಪಡೆಯಲು ವಿಷಯ ಸಿದ್ಧಪಡಿಸಿ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆಗಾಗಿ ವಿಷಯ ಮಂಡಿಸಿದೆ.

********

ಮಾನ್ಯ ಕುಲಸಚಿವರು ಮಾತನಾಡುತ್ತಾ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ರಾಜ್ಯದ ವಿವಿಧೆಡೆ ಸ್ಥಾಪಿಸಿರುವ ಮತ್ತು ಮುಂದೆ ಸ್ಥಾಪಿಸಲಾಗುವ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಗೌರವ ಸಂಭಾವನೆ, ಪ್ರೋತ್ಸಾಹಧನವನ್ನು ನಿಗಧಿಗೊಳಿಸುವ ಬಗ್ಗೆ ದಿನಾಂಕ: 21.01.2023ರಂದು ನಡೆದ 170ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಪ್ರವೇಶಾತಿಗೆ ನಿಗಧಿಪಡಿಸಿದ ಒಟ್ಟಾರೆ ಶುಲ್ಕದಲ್ಲಿ ಶೇಕಡ 20%ರಷ್ಟನ್ನು ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಪ್ರೋತ್ಸಾಹಧನವನ್ನು ಪಾವತಿಸಲು ತೀರ್ಮಾನಿಸಲಾಗಿತ್ತು. ಆದರೆ, 170ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಕೇವಲ ಸ್ನಾತಕ ವಿಷಯಕ್ಕೆ ಮಾತ್ರ ಅನುಮೋದನೆ ಪಡೆಯಲಾಗಿರುತ್ತದೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ. ನಾಗೇಂದ್ರ ರವರು ಮಾತನಾಡುತ್ತಾ, ಸದರಿ ವಿಚಾರವಾಗಿ ಒಟ್ಟಾರೆ ಶುಲ್ಕದಲ್ಲಿ ಶೇಕಡ 20% ಬದಲಾಗಿ 15 % ರಷ್ಟನ್ನು ನಿಗದಿಪಡಿಸಲು ತಮ್ಮ ಅಭಿಪ್ರಾಯವನ್ನು ವ್ಯಕ್ತ ತಿಳಿಸಿದರು.

ಮಾನ್ಯ ಕುಲಸಚಿವರು ಮಾತನಾಡುತ್ತಾ, ಚೆನ್ನೈ ವಿ.ವಿ. ನಿಲಯದಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಪ್ರೋತ್ಸಾಹಧನವಾಗಿ ಶೇಕಡ 45% ರಷ್ಟನ್ನು ನಿಗದಿಪಡಿಸಲಾಗಿದೆ, ಇದಕ್ಕೆ ಹೋಲಿಸಿದರೆ ಕರಾಮುವಿ ನಿಲಯದಲ್ಲಿ ಪ್ರೋತ್ಸಾಹಧನದ ಮೊತ್ತವನ್ನು ಕಡಿಮೆ ನಿಗದಿಪಡಿಸಿರುವುದಾಗಿ ತಿಳಿಸಿದರು.

********

<u>ತೀರ್ಮಾನ</u> :

**ಸದರಿ ವಿಷಯಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ಕರಾಮುವಿ ನಿಲಯದಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ, ಪಿಜಿ ಡಿಪ್ಲೋಮಾ, ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಕಲಿಕಾರ್ಥಿ ಸಹಾಯ ಕೇಂದ್ರಗಳಲ್ಲಿ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಗೆ ನಿಗಧಿಪಡಿಸಿದ ಪ್ರವೇಶಾತಿ ಶುಲ್ಕದಲ್ಲಿ ಕಾರ್ಯಕ್ರಮ/ಕೋರ್ಸ್‌ಗಳಿಗೆ ಪ್ರತಿ ವಿದ್ಯಾರ್ಥಿಯ ಪ್ರವೇಶಾತಿ ಶುಲ್ಕದಲ್ಲಿ ಶೇಕಡ 20%ರಷ್ಟು ಪ್ರೋತ್ಸಾಹಧನದ ಮೊತ್ತವನ್ನು ವಿಶ್ವವಿದ್ಯಾನಿಲಯದಿಂದ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಪಾವತಿಸುವ ಸಂಬಂಧ ಹಾಗೂ ಕರಾಮುವಿ ವತಿಯಿಂದ ಸರ್ಕಾರಿ ಕಾಲೇಜುಗಳಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಿದ್ದಲ್ಲಿ ಈ ಹಿಂದೆ ನಿಗಧಿಪಡಿಸಲಾಗಿರುವಂತೆ ಗೌರವ ಸಂಭಾವನೆಯನ್ನು ಮುಂದುವರಿಸಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.**

ಕುಲಪತಿಗಳು

ಕುಲಸಚಿವರು

**ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು:**

1. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಹುದ್ದೆಗಳಿಗೆ ಪದೋನ್ನತಿ ನೀಡಿರುವುದನ್ನು ಪರಿಶೀಲಿಸುವ ಸಂಬಂಧ ದಿನಾಂಕ: 21.01.2023 ರಂದು ನಡೆದ 170 ನೇ ಮಾನ್ಯ ವ್ಯವಸ್ಥಾಪನಾ ಮಂಡಳಿ ತೀರ್ಮಾನದನ್ವಯ ಸಮಿತಿಯನ್ನು ರಚಿಸಿ, ವಿ.ವಿ. ನಿಲಯವು ಸಂಖ್ಯೆ/ ಕರಾಮುವಿ/ಆವಿ/ಸಿಬ್ಬಂದಿ–2/1117/2022–2023 ದಿನಾಂಕ: 10.02.2023 ಆದೇಶಿಸಲಾಗಿರುತ್ತದೆ.

ವಿಶ್ವವಿದ್ಯಾನಿಲಯದಲ್ಲಿ ಪರಿಚಾರಕ ಹುದ್ದೆಯಿಂದ ದ್ವಿತೀಯ ದರ್ಜೆ ಸಹಾಯಕ ಹುದ್ದೆಗೆ, ದ್ವಿತೀಯ ದರ್ಜೆ ಗುಮಾಸ್ತ, ಟಿ.ಸಿ.ಸಿ ಮತ್ತು ಡಿ.ಇ.ಓ ಹುದ್ದೆಯಿಂದ ಪ್ರಥಮ ದರ್ಜೆ ಗುಮಾಸ್ತ ಹುದ್ದೆಗೆ, ಪ್ರಥಮ ದರ್ಜೆ ಗುಮಾಸ್ತ ಹುದ್ದೆಯಿಂದ ಹಿರಿಯ ಸಹಾಯಕ ಹುದ್ದೆಗೆ, ಡಿ.ಇ.ಓ ಹುದ್ದೆಯಿಂದ ಶೀಘ್ರಲಿಪಿಗಾರರ ಹುದ್ದೆಗೆ, ಹಿರಿಯ ಸಹಾಯಕ ಹುದ್ದೆಯಿಂದ ಅಧೀಕ್ಷಕ ಹುದ್ದೆಗೆ, ಅಧೀಕ್ಷಕ ಹುದ್ದೆಯಿಂದ ಸಹಾಯಕ ಕುಲಸಚಿವ ಹುದ್ದೆಗೆ ಹಾಗೂ ಕಿರಿಯ ಅಭಿಯಂತರ ಹುದ್ದೆಯಿಂದ ಸಹಾಯಕ ಅಭಿಯಂತರ (ಸಿವಿಲ್) ಹುದ್ದೆಗೆ ವಿವಿಧ ದಿನಾಂಕಗಳಂದು ಪದೋನ್ನತಿ ನೀಡಿರುವುದರ ಬಗ್ಗೆ ಪರಿಶೀಲಿಸುವ ಸಂಬಂಧ ದಿನಾಂಕ: 09.03.2023 ರಂದು ರಚಿತಗೊಂಡಿರುವ ಪರಿಶೀಲನಾ ಸಮಿತಿ ಸಭೆಯು ತನ್ನ ವರದಿಯನ್ನು ಸಲ್ಲಿಸಿದ್ದು, ವಿವಿಧ ಹುದ್ದೆಗಳಿಗೆ ನೀಡಿರುವ ಪದೋನ್ನತಿಯು ಕ್ರಮಬದ್ಧವಾಗಿರುವುದಿಲ್ಲ, ಪದೋನ್ನತಿ ನಿಯಮಗಳಲ್ಲಿ ಅವಕಾಶವಿರುವುದಿಲ್ಲ ಕಾನೂನಿಗೆ ವಿರುದ್ಧವಾಗಿರುತ್ತದೆ ಹಾಗೂ ಊರ್ಜಿತವಾಗುವುದಿಲ್ಲ.

**ಆದ್ದರಿಂದ ಪದೋನ್ನತಿಯನ್ನು ಹಿಂಪಡೆಯಲು ಕ್ರಮ ವಹಿಸಬಹುದಾಗಿದೆ ಎಂದು ಸದಸ್ಯರು ಅಭಿಪ್ರಾಯಿಸಿರುತ್ತಾರೆ.**

******

ಮಾನ್ಯ ಕುಲಸಚಿವರು ವಿವಿಧ ಹುದ್ದೆಗಳಿಗೆ ಪದೋನ್ನತಿ ನೀಡಿರುವುದರ ಬಗ್ಗೆ ವಿವರಿಸಿದರು.

ಮಾನ್ಯ ಸದಸ್ಯರಾದ ಶ್ರೀ. ನಾಗೇಂದ್ರ ರವರು ಮಾತನಾಡುತ್ತಾ, ಸಮಿತಿಯು ವಿವಿಧ ಹುದ್ದೆಗಳಿಗೆ ಪದೋನ್ನತಿ ನೀಡಿರುವುದರ ಬಗ್ಗೆ ಈಗಾಗಲೇ ತನ್ನ ತೀರ್ಮಾನವನ್ನು ನೀಡಿರುವುದರಿಂದ ಸಮಿತಿಯ ವರದಿಯನ್ನು ಪಾಲಿಸಲು ತಿಳಿಸಿದರು.

ಮಾನ್ಯ ಡೀನ್(ಶೈಕ್ಷಣಿಕ) ರವರು ಮಾತನಾಡುತ್ತಾ, ಸಮಿತಿ ಸಭೆಯ ತೀರ್ಮಾನವನ್ನು ಗೌರವಿಸುವುದು ಒಳಿತೆಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು.

********

**ಪರಿಶೀಲನಾ ಸಮಿತಿ ಸಭೆಯ ತೀರ್ಮಾನದಂತೆ, ಶ್ರೀ ಸಿ.ಎಂ ಕೃಷೇಗೌಡ, ಇವರಿಗೆ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಯಿಂದ ಪ್ರಥಮ ದರ್ಜೆ ಗುಮಾಸ್ತ ಹುದ್ದೆಗೆ ಪದೋನ್ನತಿ ನೀಡಿರುವುದು ಕ್ರಮಬದ್ಧವಾಗಿದ್ದು, ಪದೋನ್ನತಿಗೆ ಅರ್ಹ ದಿನಾಂಕದಿಂದ ಪರಿಗಣಿಸಲು ಸಮಿತಿ ವರದಿಯಲ್ಲಿ ಅಭಿಪ್ರಾಯಿಸಲಾಗಿರುತ್ತೆ ಮತ್ತು ಡಿ.ಇ.ಓ ಹುದ್ದೆಯಿಂದ ಶೀಘ್ರಲಿಪಿಗಾರ ಹುದ್ದೆಗೆ ಪದೋನ್ನತಿ ನೀಡಲಾಗಿರುವ ಸಂಬಂಧ ಯಾವುದೇ ಆರ್ಥಿಕ ಸೌಲಭ್ಯ ಇಲ್ಲದೇ ಮುಂದುವರಿಸಬಹುದಾಗಿದ್ದು, ಪರಿನಿಯಮ ಅಂಕಿತಗೊಂಡು ಬಂದ ನಂತರ, ಜೇಷ್ಠತೆ ಆಧಾರದ ಮೇಲೆ ಆರ್ಥಿಕ ಸೌಲಭ್ಯಗಳನ್ನು ಬಿಡುಗಡೆಗೊಳಿಸಬಹುದಾಗಿದೆ ಎಂದು ಸಭೆಯು ಅಭಿಪ್ರಾಯಿಸಲಾಗಿದೆ. ಉಳಿದಂತೆ ವಿವಿಧ ಹುದ್ದೆಗಳಿಗೆ ಪದೋನ್ನತಿ ನೀಡಿರುವುದನ್ನು ಹಿಂಪಡೆಯಲು ವ್ಯವಸ್ಥಾಪನಾ ಮಂಡಳಿ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.**

********

ಕುಲಪತಿಗಳು ಕುಲಸಚಿವರು

2. ಪ್ರೊ. ಎಂ. ರಾಮನಾಥಂ ನಾಯ್ಡು, ಇವರಿಗೆ 6ನೇ ಮತ್ತು 7ನೇ ಪರಿಷ್ಕೃತ ವೇತನದ ಹಿಂಬಾಕಿ ಮೊತ್ತವನ್ನು ಬಿಡುಗಡೆಗೊಳಿಸಿರುವ ಸಂಬಂಧ ದಿನಾಂಕ: 21.01.2023 ರಂದು ನಡೆದ 170 ನೇ ಮಾನ್ಯ ವ್ಯವಸ್ಥಾಪನಾ ಮಂಡಳಿ ತೀರ್ಮಾನದನ್ವಯ ಸಮಿತಿಯನ್ನು ರಚಿಸಿ ಸಂಖ್ಯೆ/ ಕರಾಮುವಿ/ ಆವಿ/ಸಿಬ್ಬಂದಿ–1/82/2022–2023 ದಿನಾಂಕ: 14.02.2023 ಆದೇಶಿಸಲಾಗಿರುತ್ತದೆ.

ದಿನಾಂಕ: 09.03.2023 ರಂದು ವೇತನದ ಹಿಂಬಾಕಿ ಮೊತ್ತವನ್ನು ಬಿಡುಗಡೆಗೊಳಿಸಿರುವ ಸಂಬಂಧ ದಿನಾಂಕ: 09.03.2023 ರಂದು ರಚಿತಗೊಂಡಿರುವ ಪರಿಶೀಲನಾ ಸಮಿತಿ ಸಭೆಯಲ್ಲಿ 6ನೇ ಮತ್ತು 7ನೇ ಪರಿಷ್ಕೃತ ವೇತನದ ಹಿಂಬಾಕಿ ಮೊತ್ತವನ್ನು ಬಿಡುಗಡೆಗೊಳಿಸಿರುವುದು ಕ್ರಮಬದ್ಧವಾಗಿರುವುದಿಲ್ಲ. ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯು ನಡೆಯುತ್ತಿದ್ದು, ವಿಚಾರಣೆಯು ಪೂರ್ಣಗೊಂಡ ನಂತರ ಆರ್ಥಿಕ ಸೌಲಭ್ಯವನ್ನು ನೀಡಬಹುದಾಗಿರುತ್ತದೆ.

**ಈ ಹಿನ್ನೆಲೆಯಲ್ಲಿ ಸದರಿಯವರಿಗೆ ನೀಡಲಾದ 6ನೇ ಮತ್ತು 7ನೇ ಪರಿಷ್ಕೃತ ವೇತನದ ಹಿಂಬಾಕಿ ಮೊತ್ತವನ್ನು ಹಿಂಪಡೆಯಲು ಕ್ರಮ ವಹಿಸಬಹುದಾಗಿದೆ ಎಂದು ಸಭೆಯು ಅಭಿಪ್ರಾಯಿಸಲಾಗಿದೆ.**

********

**ಪರಿಶೀಲನಾ ಸಮಿತಿ ಸಭೆಯ ತೀರ್ಮಾನದಂತೆ, 6ನೇ ಮತ್ತು 7ನೇ ಪರಿಷ್ಕೃತ ವೇತನದ ಹಿಂಬಾಕಿ ಮೊತ್ತವನ್ನು ಹಿಂಪಡೆಯಲು ವ್ಯವಸ್ಥಾಪನಾ ಮಂಡಳಿ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.**

ಅಂತಿಮವಾಗಿ, ವ್ಯವಸ್ಥಾಪನಾ ಮಂಡಳಿಯ 171ನೇ ಸಾಮಾನ್ಯ ಸಭೆಗೆ ಆಗಮಿಸಿ ಮಂಡಿಸಲಾದ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಮಾನ್ಯ ಕುಲಪತಿಗಳು ಎಲ್ಲ ಸದಸ್ಯರುಗಳಿಗೂ ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

**ಕುಲಪತಿಗಳು** | **ಕುಲಸಚಿವರು**